ಸರ್ಕಾರಿ ಕಿರಿಯ ಕಾಲೇಜುಗಳ ಕುರಿತಂ

೪೫೯. ಶ್ರೀ ಪಿ. ಬಿ. ಓಂಕಾರಮೂರ್ತಿ (ಕಡೂರು).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಡೂರು ತಾಲ್ಲೂಕು ಪಂಚನಹಳ್ಳಿ, ಕಡೂರು, ಚೌಳಹಿರಿಯೂರು. ಯಗಟಿ ಸ್ಥಳಗಳಲ್ಲಿ ಸರ್ಕಾರಿ ಕಿರಿಯ ಕಾಲೇಜುಗಳು ಪ್ರಾರಂಭವಾಗಿ ಎಷ್ಟು ವರ್ಷಗಳಾದವು ?

ಆ) ಈ ಕಾಲೇಜುಗಳಿಗೆ ಮೂಲ ಸೌಲಭ್ಯವಾದ ಕಟ್ಟಡದ ಅವಶ್ಯಕತೆಯ ಬಗ್ಗೆ ಸಾರ್ವಜನಿಕರಿಂದ ಮನವಿ ಬಂದಿದ್ದರೂ ಕ್ರಮ ಕೈಗೊಳ್ಳದಿರುವುದಕ್ಕೆ ಕಾರಣಗಳೇನು ?

ಇ) ಈ ಸೌಲಭ್ಯವನ್ನು ಈ ಸಾಲಿನಲ್ಲಿ (೧೯೮೭–೮೮) ಕಲ್ಪಿಸಿಕೊಡಲಾಗುವುದೆ ?

ಶ್ರೀ ಜೀವರಾಜಆಳ್ವ (ಉನ್ನತ ಶಿಕ್ಷಣ ಮಂತ್ರಿ).—

ಅ) ಕಡೂರು, ಪಂಚನಹಳ್ಳಿ ಚೌಳಹಿರಿಯೂರು ಸರ್ಕಾರಿ ಕಿರಿಯ ಕಾಲೇಜು ಸ್ಥಾಪನೆಯಾಗಿ ೧೫ ವರ್ಷಗಳಾಯಿತು. (೧೯೭೨)ಯಗಟಿ ಸರ್ಕಾರಿ ಕಿರಿಯ ಕಾಲೇಜು ಸ್ಥಾಪನೆಯಾಗಿ ೩ ವರ್ಷವಾಯಿತು. (೧೯೮೪).

ಆ) ಹಣಕಾಸಿನ ಕೊರತೆಯ ಕಾರಣ ೧೯೮೭–೮೮ನೇ ಸಾಲಿನಲ್ಲಿ ಕಾಮಗಾರಿಗಳಿಗೆ ಹಣ ಒದಗಿಸಲಾಗಲಿಲ್ಲ.

ಇ) ಈಗಾಗಲೇ ೧೯೮೭–೮೮ರ ಆಯವ್ಯಯ ಪತ್ರ ಮಂಡಿಸಿರುವುದರಿಂದ ಈ ಪ್ರಶ್ನೆ ಉದ್ಭವಿಸದು.

ಉಪನ್ಯಾಸಕರುಗಳಿಗೆ ಬಡ್ತಿ ಕೊಡುವ ಬಗ್ಗೆ

೪೬೦. ಶ್ರೀ ಓಂಕಾರಮೂರ್ತಿ (ಕಡೂರು).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕಳೆದ ಒಂದು ವರ್ಷದಿಂದ ಕಡೂರು ತಾಲ್ಲೂಕು ಪಂಚನಹಳ್ಳಿಯ ಸರ್ಕಾರಿ ಕಿರಿಯ ಕಾಲೇಜಿನಲ್ಲಿ ಭೌತಶಾಸ್ತ್ರದ ಉಪನ್ಯಾಸಕರು ಹಾಗೂ ಯಗಟಿಯಲ್ಲಿ ಇಂಗ್ಲೀಷ್ ಉಪನ್ಯಾಸಕರು ಇಲ್ಲದಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಮೇಲ್ಕಂಡ ಉಪನ್ಯಾಸಕರುಗಳನ್ನು ಈ ಸಾಲಿನಲ್ಲಿ ಭರ್ತಿ ಮಾಡುವ ಬಗ್ಗೆ ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿ).—

ಅ) ಬಂದಿದೆ.

ಆ) ಈ ವಿಷಯದಲ್ಲಿ ರಾಜ್ಯ ಮಟ್ಟದ ಆಯ್ಕೆ ಸಮಿತಿಯು ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆಯಾಗಿದ್ದು, ಅವರುಗಳನ್ನು ನೇಮಕ ಮಾಡುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗುತ್ತಿದೆ. ಆದಷ್ಟು ಜಾಗ್ರತೆ ಈ ಹುದ್ದೆಗಳನ್ನು ತುಂಬಲಾಗುವುದು.

ಪ್ರಯೋಗಾಲಯ ಮಂತ್ತು ಪೀಠೋಪಕರಣಗಳನ್ನು ಒದಗಿಸುವ ಬಗ್ಗೆ

೪೬೧. ಶ್ರೀ ಪಿ. ಬಿ. ಓಂಕಾರಮೂರ್ತಿ (ಕಡೂರು).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಡೂರು ತಾ : ಪಂಚನಹಳ್ಳಿ ಮತ್ತು ಸರ್ಕಾರಿ ಕಿರಿಯ ಕಾಲೇಜುಗಳಲ್ಲಿ ವಿಜ್ಞಾನ ಬೋಧನೆ ಕಳೆದ ೮ ವರ್ಷಗಳಿಂದ ನಡೆಯುತ್ತಾ ಬಂದಿದ್ದರೂ ಪ್ರಯೋಗಾಲಯ ಹಾಗೂ ಪೀಠೋಪಕರಣಗಳನ್ನು ಒದಗಿಸದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?